ನಮ್ಮ ರೈತರೂ ಉಳಿಯುವಂತಿಲ್ಲ. ದಯವಿಟ್ಟು ಈ ಸಂಬಂಧವಾಗಿ ಆರು ತಿಂಗಳು, ವರ್ಷವೆಂದು ಕೇಳುವುದು ಬೇಡ, ಇದನ್ನು ಆದ್ಯತೆಯ ಕಾರ್ಯಕ್ರಮವೆಂದು ತಿಳಿದುಕೊಂಡು ಉತ್ತರ ಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ಸೂಯೇಜ್ ಟ್ರೀಟಮೆಂಟ್ ಪ್ಲಾಂಟ್ ಹಾಕಿರುವ ವಿಚಾರ ಅವರಿಗೂ ಗೊತ್ತಿರುವುದರಿಂದ ಬರುವ ಆರು ತಿಂಗಳೊಳಗಾಗಿ ಚಾಲು ಮಾಡಿ ಕಾರ್ಯಗತ ಗೊಳಿಸುತ್ತೇವೆ.

ಗೋವಾ ಸ್ವಾತಂತ್ರ್ಯ ಯೋಧರಿಗೆ ಗೌರವಧನವನ್ನು ಸ್ಥಗಿತಗೊಳಿಸಿರುವ ಬಗ್ಗೆ

76 (714) ಶ್ರೀ ಅಶೋಕ ಶಂಕರ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋವಾ ಸ್ವಾತಂತ್ರ್ಯ ಯೋಧರಿಗೆ ನೀಡುತ್ತಿದ್ದ ಗೌರವಧನವನ್ನು ಈಗ ಸ್ಥಗಿತ ಗೊಳಿಸಿರುವುದಕ್ಕೆ ಕಾರಣಗಳೇನು?

ಆ) ಇವರಿಗೂ ಗೌರವಧನ ನೀಡುವುದನ್ನು ಪುನರ್‌ಪರಿಶೀಲಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ನೀಡಲಾಗುವುದು.

ಶ್ರೀ ಜೆ.ಹೆಚ್ ಪಟೇಲ್ (ಮುಖ್ಯಮಂತ್ರಿಗಳು)

ಅ) ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವಧನ ಮಂಜೂರು ಮಾಡುವ ಕುರಿತು ಶ್ರೀ ಜಿ.ಎಲ್.ರಾಮರೆಡ್ಡಿಯವರನ್ನು ತಂಡದ ನಾಯಕರನ್ನಾಗಿ ನೇಮಿಸಿದ್ದು ಸದರಿಯವರು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ಗೌರವಧನ ಮಂಜೂರು ಮಾಡಲಾಗುತ್ತಿತ್ತು. ಸದರಿ ಯೋಜನೆ ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣದ ಮೇರೆಗೆ ದಿನಾಂಕ 19-4-95ರಿಂದ ಜಾರಿಗೆ ಬರುವಂತೆ ಈ ಯೋಜನೆಯನ್ನು ಸರ್ಕಾರ ಹಿಂತೆಗೆದುಕೊಂಡಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಅಶೋಕ್ ಶಂಕರ್ ಕಾಟ್ವೆ : ಸನ್ಮಾನ್ಯ ಉಪಾಧ್ಯಕ್ಷರೆ, ಗೋವಾವಿಮೋಚನಾ ಚಳವಳಿಯಲ್ಲಿ ಭಾಗವಹಿಸಿದಂಥ ಸ್ವಾತಂತ್ರ್ಯ ಯೋಧರಿಗೆ ಹಲವಾರು ವರ್ಷಗಳಿಂದ ಗೌರವಧನವನ್ನು ಸರ್ಕಾರ ಕೊಡುತ್ತಿದ್ದು, ಆದರೆ, ದಿನಾಂಕ 19.4.95ರಿಂದ ಗೌರವಧನವನ್ನು ಕೊಡು ವುದನ್ನು ನಿಲ್ಲಿಸಲಾಯಿತು. ಸದರಿ ಚಳವಳಿಯಲ್ಲಿ ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ, ಧಾರವಾಡ, ಕಾರವಾರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಯೋಧರು ಭಾಗವಹಿಸಿದ್ದರಿಂದ ಆಗಿನ ಸರ್ಕಾರ ಅವರಿಗೆ ಗೌರವಧನವನ್ನು ಮಂಜೂರು ಮಾಡಿತ್ತು. ಅವರ ಕಾರ್ಯನಿರ್ವಹಣೆ ಸರಿಯಾಗಿಲ್ಲವೆನ್ನುವ ಕಾರಣಕ್ಕಾಗಿ ಗೌರವಧನ ಕೊಡುವುದನ್ನು ನಿಲ್ಲಿಸಿದರು. ಅದುದರಿಂದ, ಗೋವಾ ವಿಮೋಚನಾ ಚಳವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಯೋಧರಿಗೆ ಗೌರವಧನ ಕೊಡುವುದನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಪೂರಕವಾಗಿ ನಾನು ಉಪ ಪ್ರಶ್ನೆ ಕೇಳಬಯಸುತ್ತೇನೆ. ಏನೆಂದರೆ, ಸರ್ಕಾರ ದಿನಾಂಕ 1.1.90ರಿಂದ ಗೋವಾ ವಿಮೋಚನಾ ಚಳವಳಿಯಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಯೋಧರಿಗೆ ಗೌರವಧನ ನೀಡುತ್ತಿತ್ತು. ಸದರಿ ಗೌರವಧನವನ್ನು ದಿನಾಂಕ 1.4.95ರಿಂದ ಕೊಡುವುದನ್ನು ಬಂದ್ ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ. ಪಕ್ಕದ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯ ಸರ್ಕಾರಗಳು ಅಲ್ಲಿನ ಸ್ವಾತಂತ್ರ್ಯ ಯೋಧರಿಗೆ ಗೌರವಧನ ನೀಡುತ್ತಿವೆ. ಆದರಲ್ಲೂ ಸದರಿ ಚಳವಳಿಯಲ್ಲಿ ಕರ್ನಾಟಕದಿಂದ ಭಾಗವಹಿಸಿಂಥ ಸ್ವಾತಂತ್ರ್ಯ ಯೋಧರ ಸಂಖ್ಯೆ ಬಹಳಷ್ಟಿದ್ದು, ಕರ್ನಾಟಕ ಸ್ವಾತಂತ್ರ್ಯ ಹೋರಾಟ ತವರು ಮನೆಯಾಗಿದೆ. ಆದುದರಿಂದ, ಸ್ವಾತಂತ್ರ್ಯ ಯೋಧರಿಗೆ ಗೌರವಧನ ಕೊಡುವುದನ್ನು ಮುಂದುವರೆಸಿಕೊಂಡು ಹೋಗ ಬೇಕೆಂದು ತಮ್ಮ ಮುಖಾಂತರ ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ದಿನಾಂಕ 1.1.91ರಿಂದ ಗೌರವಧನ ಮಂಜೂರಾತಿಯಾಗಿರುವುದ ನಿಜ. ಆದರೆ, ಆ ಸಂದರ್ಭದಲ್ಲಿ ಯಾವುದೇ ಕಾಗದಪತ್ರಗಳಾಗಲಿ ಮತ್ತು ಸೆರೆಮನೆ ವಾಸ ಅನುಭವಿಸಿರುವುದರ ಪ್ರಮಾಣಪತ್ರಗಳು ಸಿಗದಿರುವುದರಿಂದ ಆ ಕಾಲದಲ್ಲಿದ್ದಂಥ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಜಿ.ಎಲ್.ರಾಮರೆಡ್ಡಿಯವರು ಕೊಡುವಂಥ ಪ್ರಮಾಣದ ಪತ್ರದ ಆಧಾರದ ಮೇಲೆ ಕೆಲವು ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನ ಮಂಜೂರಾತಿ ಮಾಡಬೇಕೆಂದಾಯಿತು. ಆಗ ಸುಮಾರು ನಾಲ್ಕು ಸಾವಿರಕ್ಕಿಂತಲೂ ಹೆಚ್ಚು ಈ ರೀತಿಯಾಗಿ ಪ್ರಮಾಣಪತ್ರ ಕೊಟ್ಟಿರುವುದು ಕಂಡುಬಂದಾಗ ಜಿ.ಎಲ್.ರಾಮರೆಡ್ಡಿಯವರು ಒಂದು ಪತ್ರ ಬರೆದು ನನ್ನ ಸಹಿಯನ್ನೂ ಕೂಡ ಫೋರ್ಜರಿ ಮಾಡಿದ್ದಾರೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರು. ಆದರಲ್ಲಿ ಅವರೊಬ್ಬರೇ 2,225 ಜನರಿಗೆ ಪ್ರಮಾಣಪತ್ರ ಕೊಡುತ್ತಾರೆ. ಒಬ್ಬ ವ್ಯಕ್ತಿ 2,225 ಜನರನ್ನು ಹೇಗೆ ಜ್ಞಾಪಕವಿಟ್ಟುಕೊಂಡಿದ್ದರೆಂಬ ಪ್ರಶ್ನೆ ಬೇರೆ ವಿಚಾರ.ಈ ರೀತಿಯಾಗಿ ಅನೇಕದೂರು ಗಳು ಬಂದಿದ್ದರಿಂದ 1,943 ಪ್ರಕರಣಗಳನ್ನು ಪರೀಕ್ಷೆ ಮಾಡಿ ಈ ವಿಚಾರದಲ್ಲಿ ಅವರಿಗೆ ಗೌರವಧನ ಕೊಡುವುದನ್ನು ನಾವು ರದ್ದುಗೊಳಿಸಿದ್ದೇವೆ. ರದ್ದುಗೊಳಿಸಿದ ನಂತರ ಕೆಲವರು ಹೈಕೋರ್ಟಿಗೆ ಹೋದರು.ಆ ಸಂದರ್ಭದಲ್ಲಿ ಹೈಕೋರ್ಟ್ ತೀರ್ಪು ನೀಡಿ ಅವರಿಗೆ ಯಾವುದೇ ಕಾರಣ ಕೇಳದೆ ಗೌರವಧನ ರದ್ದುಗೊಳಿಸಿರುವುದಕ್ಕೆ ಅರಿಯರ್ಸ್ ಕೊಡುವುದು ಹಾಗೂ ಉಳಿದಿರತಕ್ಕಂಥಾದ್ದು ನಿಮಗೆ ಬಿಟ್ಟಿರುವ ವಿಚಾರ ಎಂದು ಹೇಳಿದನಂತರವೂ ಅವರು ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿದರು. ಮೇಲ್ಮನವಿ ಅರ್ಜಿ ಹೈಕೋರ್ಟಿನಲ್ಲಿ ತಿರಸ್ಕೃತವಾಯಿತು. ಬಳಿಕ ಸುಪ್ರಿಂ ಕೋರ್ಟಿಗೆ ಎಸ್.ಎಲ್.ಪಿ. ಹಾಕಿದಾಗಲೂ ಕೂಡ ಅಡ್ಮಿವ್ ಆಗಲಿಲ್ಲ. ಗೌರವಧನ ನೀಡುವ ವಿಚಾರದಲ್ಲಿ ಮಹಾರಾಷ್ಟ್ರ ಹಾಗೂ ಗುಜರಾತ್‌ನಲ್ಲಿ ನಿಯಮಾವಳಿ ಬೇರೆ ರೀತಿಯಾಗಿದೆ. ಕನಿಷ್ಠ ಪಕ್ಷ ಆರು ತಿಂಗಳ ಸೆರೆಮನೆ ವಾಸ ಅನುಭವಿಸಿರುವುದೂ ಇದೆ. ಇಲ್ಲಿ ಯಾವುದೇ ಕಾಗದ ಪತ್ರಗಳು ಇಲ್ಲದಿರುವುದರಿಂದ ಅಲ್ಲದೆ, ಸ್ವತಃ ಈ ಪತ್ರ ಕೊಟ್ಟಿರುವವರೇ ನನ್ನ ಹೆಸರನ್ನು ಫೋರ್ಜರಿ ಮಾಡಿದ್ದಾರೆನ್ನುವ ಕಾರಣಕ್ಕಾಗಿ ಅನೇಕ ಪ್ರಕರಣಗಳಲ್ಲಿ ನೋಡಿದಾಗ ಆ ಸಂದರ್ಭದಲ್ಲಿ ಅವರು ತೀರಾ ಚಿಕ್ಕ ವಯಸ್ಸಿನವರಾಗಿದ್ದರೆಂಬ ದೂರುಗಳ ಹಿನ್ನೆಲೆಯಲ್ಲಿ ಇದನ್ನು ರದ್ದುಗೊಳಿಸಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್ : ಗೋವಾ ಸತ್ಯಾಗ್ರಹದಲ್ಲಿ ಕರ್ನಾಟಕದ 20 ಜನ ಕನ್ನಡಿಗರು ಸತ್ತಿದ್ದಾರೆ. ಅದು ಸರ್ಕಾರದ ಕಡತದಲ್ಲಿದೆ. ಗೋವಾ ಸತ್ಯಾಗ್ರಹದ ಇತಿಹಾಸದಲ್ಲಿದೆ. ನಾನು ತಮಗೆ ಹೇಳುವುದೇನೆಂದರೆ, ಸಾರಾಸಗಟಾಗಿ ಗೌರವಧನವನ್ನು ಎಲ್ಲರಿಗೂ ನಿಲ್ಲಿಸುವುದು ಬೇಡ. ತಾವು ಪ್ರಾಮಾಣಿಕವಾಗಿ ಇದರ ಬಗ್ಗೆ ಚಿಂತನೆ ಮಾಡಿ, ಅವರನ್ನೂ ಕರೆದು ಮಾತನಾಡಿ ವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ದಯಮಾಡಿ ಹೇಳಬೇಕು, ಇದನ್ನು ಕಳಕಳಿಯಿಂದ ಪರಿಶೀಲಿಸಬೇಕು. ನಮ್ಮ ರಾಜ್ಯದಲ್ಲಿ ದೀನಬಂಧು ವಿ.ಆರ್.ನಾಯ್ಡು ಅವರಿದ್ದು, ಅದಕ್ಕೆ ಅಧ್ಯಕ್ಷರಾಗಿರುವುದರಿಂದ, ಅವರನ್ನು ತಾವು ಕರೆಸಿ ನಿಜವಾದ ಸ್ವಾತಂತ್ರ್ಯ ಯೋಧರು ಯಾರು, ಖೋಟಾ ಸ್ವಾತಂತ್ರ್ಯ ಯೋಧರು ಯಾರಿದ್ದಾರೆಂಬುದನ್ನು ಕಂಡುಹಿಡಿದು ಸಮಸ್ಯೆಯನ್ನು ಬಗೆಹರಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದಲ್ಲಿ ಸರ್ಕಾರ ನಿಷ್ಪಕ್ಷಪಾತವಾದ ಧೋರಣೆ ತೆಗೆದುಕೊಂಡಿದ್ದು, ಅವ್ಯವಹಾರಗಳಾಗಿರುವ ಹಿನ್ನೆಲೆಯಲ್ಲಿ ತೀರಾ ಇದಕ್ಕೆ ಅರ್ಹರಲ್ಲದವರ ಹೆಸರುಗಳನ್ನು ಪ್ರಸ್ತಾಪಿಸಲ್ಪಟ್ಟಿದ್ದು, ನ್ಯಾಯಾಲಯಗಳು ಕೂಡ ಸರ್ಕಾರದ ತೀರ್ಮಾನವನ್ನು ಎತ್ತಿಹಿಡಿದಿರುವುದರಿಂದ, ಎಲ್ಲಾ ಗೌರವಾನ್ವಿತ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಮಾತನಾಡಿ ಈ ಕುರಿತು ಚರ್ಚಿಸಿ ನ್ಯಾಯವಾಗಿ ಗೋವಾ ವಿಮೋಚನಾ ಚಳವಳಿಯಲ್ಲಿ ನೋವನ್ನು ಅನುಭವಿಸಿರುವಂಥ, ಬಲಿದಾನ ಮಾಡಿರುವವರಿಗೆ ತಾವು ಮಾನ್ಯತೆ, ಗೌರವ ನೀಡಬೇಕೆಂದು ಹೇಳಿರುವ ಹಿನ್ನೆಲೆಯಲ್ಲಿ ಸರ್ಕಾರ ಅವರ ಜೊತೆ ಮಾತುಕತೆಯಾಡಲು ಸಿದ್ದವಿದೆಯೆಂದು ಹೇಳಬಯಸುತ್ತೇನೆ.

ರೈತರ ಸಹಭಾಗಿತ್ವದಲ್ಲಿ ಕೆರೆಗಳಿಂದ ಹೂಳನ್ನು ತೆಗೆಯುವುದು.

77(477) ಶ್ರೀ ಎ.ಟಿ. ರಾಮಸ್ವಾಮಿ(ಆರಕಲಗೂಡು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತರ ಸಹಭಾಗಿತ್ವದಲ್ಲಿ ಹೂಳನ್ನು ತೆಗೆಸಲಾದ ಕೆರೆಗಳ ಸಂಖ್ಯೆ ಎಷ್ಟು;

ಆ) ಸದರಿ ಕೆಲಸಕ್ಕೆ ಹಣ ಪಾವತಿ ಮಾಡುವಲ್ಲಿ ವಿಳಂಬವಾಗಿದ್ದು ನಿಜವೇ;

ಇ) 1997-98 ಮತ್ತು 1998-99ನೇ ಸಾಲುಗಳಲ್ಲಿ ಈ ಕಾರ್ಯಕ್ರಮಕ್ಕಾಗಿ ಆಯವ್ಯಯದಲ್ಲಿ ಒದಗಿಸಲಾದ ಹಣ ಎಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) 121ಕೆರೆಗಳು

ಆ) ಹೌದು

ಇ) 1997-98ರಲ್ಲಿ ಶೂನ್ಯ 1998-99ರಲ್ಲಿ 198 ಕೆರೆಗಳಿಗೆ 136.30ಲಕ್ಷರೂ.ಗಳು

ಶ್ರೀ ಎ.ಟಿ.ರಾಮಸ್ವಾಮಿ: ಸನ್ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಉತ್ತರಗಳನ್ನು ಕೊಡುವ ಮೂಲಕ ಈ ಸದನದ ಹಕ್ಕುಚ್ಯುತಿ ಮಾಡುತ್ತಿದೆಯೆಂದು ಹೇಳಿತ್ತಿದ್ದೇನೆ. ಸರ್ಕಾರದವರಾದ ನೀವು ಕೆರೆಗಳ ಹೂಳನ್ನು ತೆಗೆಯುವುದಕ್ಕೆ ಹಣದ ಕೊರತೆ ಇಲ್ಲವೆಂದು ಈ ಸದನದ